**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.208/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಶಿವರಾಜ್ | ಪ್ರಾಸಾ -2 |
| ತಂದೆಯ ಹೆಸರು | : ಮಹದೇವಪ್ಪ | ಚಾಸಾ-3 |
| ವಯಸ್ಸು | : 56 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕಃ19.09.2024 |
| ವಾಸಸ್ಥಳ | : ಹೊಳಲ್ಕೆರೆ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಹಿಂದೆ ನೋಡಿದ್ದೇನೆ. ಅವರು ಚಿತ್ರದುರ್ಗಕ್ಕೆ ಹೋಗುವ KSRTC ಬಸ್ ಚಾಲಕರು.

ನನ್ನ ಮಕ್ಕಳನ್ನು ಉಜಿರೆಯಲ್ಲಿ ಓದಿತ್ತಿದ್ದು ದಿ.07.07.2023 ರಂದು ಅವರನ್ನು ನೋಡಲು ನಾನು ಉಜಿರೆಗೆ ಹೋಗಿದ್ದೆ. ಆ ದಿನ ಪುನಃ ಉಜಿರೆಯಿಂದ ಚಿತ್ರದುರ್ಗಕ್ಕೆ KSRTC ಬಸ್ ನಲ್ಲಿ ವಾಪಸ್ಸು ಬರುತ್ತಿರುವಾಗ ಮ.3.15 ರ ಸಮಯಕ್ಕೆ ಚಾರ್ಮುಡಿ ಘಾಟಿನಲ್ಲಿರುವ ಅಣ್ಣಪ್ಪ ಸ್ವಾಮಿ ದೇವಸ್ಥಾನದ ಬಳಿ ಶಿವಮೊಗ್ಗದಿಂದ ಬರುತ್ತಿದ್ದ KSRTC ಬಸ್ ಹಾಗೂ ನಾನು ಇದ್ದ ಬಸ್ಸಿಗೂ ಅಪಘಾತವಾಯಿತು. ನಾವು ಇದ್ದ ಬಸ್ ನಿಧಾನವಾಗಿ ಚಲಿಸುತ್ತಿದ್ದು ಎದುರಿನಿಂದ ಬಂದ ಬಸ್ ಅತೀವೇಗ ಮತ್ತು ಅಜಾಗರುಕತೆಯಿಂದ ಬಂದು ಅಪಘಾತಪಡಿಸಿತು. ಶಿವಮೊಗ್ಗದಿಂದ ಬರುತ್ತಿದ್ದ ಬಸ್ ನ ನೋ.ಸಂ. KA-21-F-0215 ಆಗಿತ್ತು. ಅಪಘಾತದಿಂದ ನನ್ನ ಬಾಯಿ ಹಾಗೂ ಲಿವರ್ ಗೆ ಪೆಟ್ಟಾಗಿದೆ. ನನ್ನನ್ನು ಉಜಿರೆಯ ಬೆನಕ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಆನಂತರ ನಮ್ಮ ಮನೆಯವರು ಮಣಿಪಾಲದ ಕಸ್ತೂರಬಾ ಆಶ್ಪತ್ರೆಗೆ ಕರೆದುಕೊಂಡು ಹೋದರು. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ನಾವು ಚಲಿಸುತ್ತಿದ್ದ ಬಸ್ ನ ಚಾಲಕರಾಗಿದ್ದರು. ಅಪಘಾತವು ಶಿವಮೊಗ್ಗ ಕಡೆಯಿಂದ ಬರುತ್ತಿದ್ದ ಬಸ್ಸನವರದ್ದಾಗಿದೆ. ಆ ಎರಡು ಬಸ್ ಗಳನ್ನು ನೋಡಿದರೆ ನನ್ನಿಂದ ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ.ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನಾನು ಇದ್ದ ಬಸ್ ನ ನೋ.ಸಂ.KA-17-F-1901 ಎಂದರೆ ಸರಿ. ಎದುರಿನಿಂದ ಅತೀವೇಗ ಮತ್ತು ಅಜಾಗರುಕತೆಯಿಂದ ಬಂದು ಗುದ್ದಿ ಬಸ್ ನ ನೊ.ಸಂ.KA-21-F-0215 ಎಂದರೆ ಸರಿ. ಸದರಿ ಬಸ್ ನ್ನು ಆರೋಪಿಯೇ ಓಡಿಸುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ತಾವು ಬಸ್ಸಿನಲ್ಲಿ ಆರೋಪಿಯ ಪಕ್ಕದ ಸೀಟ್ ನಲ್ಲೇ ಕೂತಿದ್ದೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಅವರಿಗೆ ಸಹಾಯ ಮಾಡುವ

ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ</u>**

ಮಣಿಪಾಲ್ ಆಸ್ಪತ್ರೆಯಲ್ಲಿ ಒಂದು ವಾರ ಇದ್ದೆ. ಎದುರಿನಿಂದ ಬಂದ ಬಸ್ಸಿನ ಚಾಲಕ ಆ ಬಸ್ ನ್ನು ಅತೀವೇಗ ಮತ್ತು ಅಜಾಗರುಕತೆಯಿಂದ ಚಲಾವಣೆ ಮಾಡಿಕೊಂಡು ಬಂದ ಆರೋಪಿಯು ಚಲಾಯಿಸುತಿತದ್ದ ಬಸ್ ಗೆ ಡಿಕ್ಕಿ ಪಡಿಸಿದರು ಎಂದರೆ ಸರಿ. ಈ ಕಾರಣ ನನಗೆ ಪೆಟ್ಟಾಯಿತು ಎಂದರೆ ಸರಿ. ಪೋಲಿಸರು ನನ್ನನ್ನು ಈ ಹಿಂದೆ ಕರೆದು ವಿಚಾರಣೆ ಮಾಡಿದ್ದರೆ ಮೇಲೆ ಹೇಳುತಿದಿದ್ದುನ್ನು ಹೇಳುತ್ತಿದ್ದೆ ಎಂದರೆ ಸರಿ. ಇಲ್ಲಿಯವರಗೊ ಪೋಲಿಸರು ವಿಚಾರಣೆ ಮಾಡಿಲ್ಲ ಎಂದರೆ ಸರಿ. ನಾವು ಹೋಗುತ್ತಿದ್ದ ಬಸ್ ರಷ್ ಆಗಿತ್ತು ಎಂದರೆ ಸರಿ. ಆರೋಪಿ ಓಡಿಸುತ್ತಿದ್ದ ಬಸ್ ಹೇರುಮುಖವಾಗಿ ಹೋಗುತಿತ್ತು ಎಂದರೆ ಸರಿ.ಎದುರಿನಿಂದ ಬಂದ ಬಸ್ ಇಳಿಮುಖವಾಗಿ ಬರುತ್ತಿತ್ತು ಎಂದರೆ ಸರಿ. ನಾವು ಇದ್ದ ಬಸ್ ಹೇರುಮುಖವಾಗಿ ಹೋಗುತ್ತಿದ್ದ ಕಾರಣ ಹಾಗೂ ಬಸ್ ಬರ್ತಿಯಾಗಿದ್ದ ಕಾರಣ ಆ ಬಸ್ ನಿಧನಾವಾಗಿ ಚಲಿಸುತ್ತಿತ್ತು ಎಂದರೆ ಸರಿ.

ಎದುರಿನಿಂದ ಬಂದ ಬಸ್ ನ್ನು ನೋಡಿ ಆರೋಪಿ ತನ್ನ ಬಸ್ಸನ್ನು ರಸ್ತೆಯ ಎಡಭಾಗಕ್ಕೆ ನಿಲ್ಲಿಸಿಕೊಂಡಿದ್ದರು ಎಂದರ ಸರಿ. ಆರೋಪಿ ಓಡಿಸುತ್ತಿದ್ದ ಬಸ್ ನ ಬಲಭಾಗಕ್ಕೆ ಮತ್ತೊಂದು ಬಸ್ ಹೋಗುವಷ್ಟು ಜಾಗ ಇತ್ತು ಎಂದರೆ ಸರಿ. ನಾನು 15 ದಿನಕ್ಕೊಮ್ಮೆ ನನ್ನ ಮಕ್ಕಳನ್ನು ನೋಡಲು ಚಾರ್ಮುಡಿ ಘಾಟ್ ನ ಮೂಲಕವೇ ಹೋಗುತ್ತೇವೆ ಎಂದರೆ ಸರಿ. ಆರೋಪಿ ಮತ್ತೆ ಎರಡು ಅಡಿಯಷ್ಟು ಬಲಭಾಗಕ್ಕೆ ನಿಲಿಸಿದ್ದರೆ ಬಸ್ ಪ್ರಪಾತಕ್ಕೆ ಬೀಳುತ್ತಿತ್ತು ಎಂದರೆ ಸರಿ. ಎದುರಿನಿಂದ ಬಂದ ಬಸ್ ನ ಎಡಭಾಗಕ್ಕೆ ಗುಡ್ಡ ಸಿಗುತ್ತದೆ ಎಂದರೆ ಸರಿ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.208/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಶಾಂತವ್ವ | ಪ್ರಾಸಾ -1 |
| ಗಂಡನ ಹೆಸರು | : ಬಸವರಾಜ್ ಅಂಚಿನಾಳು | ಚಾಸಾ-1 |
| ವಯಸ್ಸು | : 58 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಮನೆ ಕೆಲಸ | ದಿನಾಂಕಃ19.09.2024 |
| ವಾಸಸ್ಥಳ | : ದಾರವಾಡ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಹಿಂದೆ ನೋಡಿಲ್ಲ. ಚಾಸಾ-12 ನನ್ನ ಮಗ.

1 ವರ್ಷದ ಹಿಂದೆ ನಾನು ಬೆಂಗಳೂರಿನಿಂದ ಕೆಲಸ ಮುಗಿಸಿ KSRTC ಬಸ್ ನಲ್ಲಿ ನಾನು ಮತ್ತು ಚಾಸಾ-12 ರವರು ಪುತ್ತೂರಿಗೆ ಹೋಗಿ ಅಲ್ಲಿಂದ ದಾರವಾಡಕ್ಕೆ ಹೋಗುತ್ತಿರುವಾಗ ಮದ್ಯಾಹ್ನ ಸಮಾರು 2.30 ರಿಂದ 3.00 ರ ಸಮಯಕ್ಕೆ ಧರ್ಮಸ್ಥಳ ಘಾಟಿಯಲ್ಲಿರುವ ಅಣ್ಣಪ್ಪ ಸ್ವಾಮಿ ದೇವಸ್ಥಾನದ ಬಳಿ ನಾವು ಇದ್ದ ಬಸ್ ಹಾಗೂ ಮತ್ತೊಂದು ಸರ್ಕಾರಿ ಬಸ್ ಗೆ ಅಪಘಾತವಾಯಿತು. ಅಪಘಾತದಿಂದ ನನ್ನ ತುಟಿಗೆ ತೀವ್ರ ಗಾಯವಾಗಿ ಬಲಗೈನ ಮದ್ಯದ ಬೆರಳು ತುಂಡಾಗಿ ನನ್ನ ಎಡಕಾಲಿನ ಮೊಣಕಾಲಿಗೆ ಗಾಯವಾಯಿತು. ಅಪಘಾತ ಹೇಗೆ ಮತ್ತು ಯಾಕಾಯಿತು ಎಂದು ನನಗೆ ಗೊತ್ತಾಗಲಿಲ್ಲ. ನಾನು ಪೋಲಿಸರಿಗೆ ದೂರು ಕೊಟ್ಟಿಲ್ಲ. ಆದರೆ ನಾನು ಆಸ್ಪತ್ರೆಯಲ್ಲಿ ಇದ್ದಾಗ ನನ್ನ ಹೆಸರು ಹಾಗೂ ಏನಾಯಿತು ಎಂದು ಕೇಳಿದರು. ಆಗ ನಾನು ಮಾತನಾಡಲು ಆಗುವುದಿಲ್ಲ ಎಂದು ಹೇಳಿದ್ದೆ.

ಸಾಕ್ಷಿಯು ದಿ.08.07.2023 ರ ಹೇಳಿಕೆಯಲ್ಲಿ ತಮ್ಮ ಸಹಿಯನ್ನು ಗುರುತಿಸಿ ಅದರಲ್ಲಿ ಏನು ಬರೆದಿದೆ ಎಂದು ಹಾಗೂ ಹೇಗೆ ಸಹಿ ಮಾಡಿದೆ ಎಂದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ.ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ದಿ.07.07.2023 ರಂದು ಬೆ.11.30 ರ ಸಮಯಕ್ಕೆ ಪತುತ್ತಾರಿನಿಂದ KA-17-F-1901 ಬಸ್ ನ್ನು ಹತ್ತಿ ನಾನು ಮತ್ತು ಚಾಸಾ-12 ರವರು ಚಾರ್ಮುಡಿ ಘಾಟಿಯ ಅಣ್ಣಪ್ಪ ಸ್ವಾಮಿ ದೇವಸ್ಥಾನದ ಬಳಿ ಮ.3.30 ರ ಸಮಯಕ್ಕೆ ಹೋಗುತ್ತಿರುವಾಗ ನಾವು ಇದ್ದ ಬಸ್ ಗೆ KA-21-F-0315 KSRTC ಬಸ್ಸಿನ ಚಾಲಕ ಆ

ಬಸ್ ನ್ನು ಅತೀವೇಗ ಮತ್ತು ಅಜಾಗರುಕತೆಯಿಂದ ಬಸ್ ಚಾಲನೆ ಮಾಡಿಕೊಂಡು ಬಂದು ಡಿಕ್ಕಿ ಪಡಿಸಿದ್ದರು ಎಂದರೆ ಸರಿ. ಆ ಬಸ್ ನ್ನು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯೇ ಚಲಾವಣೆ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ಅಪಘಾತದಿಂದ ಎರಡು ಬಸ್ ಗಳಿಗೆ ಜಖಂ ಆಗಿ ನನಗೂ, ಚಾಸಾ-2 ರಿಂದ 11 ರವರಿಗೆ ಗಾಯಗಳಾದವು ಎಂದರೆ ಸರಿ. ಆ ದಿನ ಚಾಸಾ-12 ರವರು ನನ್ನನ್ನು ಮೂಡಿಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿ. ನಂತರ ಚಿಕ್ಕಮಗಳೂರು ಆಸ್ಪತ್ರೆಗೆ ನನ್ನನ್ನು ಕಳುಹಿಸಿದ್ದು ದಿ.13.07.2023 ರವರೆಗೂ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿ. ನಾನು ವಿದ್ಯಾವಂತಳ್ಳಲ್ಲದ ಕಾರಣ ಹಾಗೂ ನನಗೆ ವಯಸ್ಸಾದ ಕಾರಣ ಅಪಘಾತದ ವಿಷಯ ನನಗೆ ಮರೆತುಹೊಗಿದ್ದು ಈಗ ಸೂಚಿಸಿದಾಗ ನೆನಪಾಯಿತು ಎಂದರೆ ಸರಿ. ಈ ಕಾರಣ ನಾನು ಹೇಳಿಕೆ ಕೊಡುವಾಗ ಬಸ್ ನಂಬರ್ ನ್ನು ತಪ್ಪಾಗಿ ಕೊಟ್ಟು ಆನಂತರ ಮರುಹೇಳಿಕೆಯಲ್ಲಿ ಸರಿಪಡಿಸಿಕೊಂಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ**

ನಾನು ಹೇಳಿದ ದಿನಾಂಕದಂದು ಘಾಟಿಯಲ್ಲಿ ನನಗೆ ತಲೆ ತಿರುಗಿ ಬಸ್ಸಿನಲ್ಲಿ ಕಣ್ಣುಮುಚ್ಚಿ ಕುಳಿತಿದ್ದೆ ಎಂದರೆ ಸರಿ. ನಾನು ಬಸ್ಸಿನ ಮುಂಭಾಗದಲ್ಲಿ ಕುಳಿತಿದ್ದೆ. ನಾವು ಇದ್ದ ಬಸ್ಸಿಗೆ ಮತ್ತೊಂದು ಬಸ್ ಡಿಕ್ಕಿ ಪಡಿಸಿದ್ದನ್ನು ನಾನು ಕಣ್ಣಾರೆ ನೋಡಿಲ್ಲ. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆ ದಿನ ನಾವು ಪುತ್ತೂರಿನಿಂದ ದಾರವಾಡಕ್ಕೆ ಹೋಗುತ್ತಿದ್ದೆವು. ಪುತ್ತೂರಿನಿಂದ ದಾರವಾಡಕ್ಕೆ ಬಸ್ಸಿನಲ್ಲಿ ಹೋಗಬೇಕಾದರೆ 2 ದಿನಗಳ ಪ್ರಯಾಣ ಎಂದರೆ ಸರಿ. ನಾವು ಹೋಗುತ್ತಿದ್ದ ಬಸ್ಸನ್ನು ಗುರುತಿಸಲು ಆಗುವುದಿಲ್ಲ. ಸರ್ಕಾರಿ ವಕೀಲರು ಕೇಳಿದ್ದಕ್ಕೆಲ್ಲ ನಾನು ಔದು ಎಂದು ಹೇಳಿದ್ದೇನೆ ಹೊರತು ಆ ವಿಚಾರವಾಗಿ ನನಗೆ ಏನೂ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.